# ಬಾಲಿವುಡ್ ನೋಡಬೇಕು



## ಪ್ರಿಯಾಂಕ ಚಿಂಚೋಳಿ

### ಸ್ಟಾರ್‌ಸುವರ್ಣದ 'ಹರಹರ ಮಹಾದೇವ'ದ ಪಾರ್ವತಿ

★ *ತ್ರಿಶೂಲ ಹಿಡಿಯಲು ಆಗುತ್ತಾ? ಜಿಮ್ ಮಾಡುತ್ತೀರಾ?*

ಅಷ್ಟು ತೂಕದ ತ್ರಿಶೂಲ ಅದಲ್ಲ. ದಿನಾ ಹಿಡಿದು ಹಿಡಿದು ಅಭ್ಯಾಸ ಆಗಿರುವುದರಿಂದ ಬ್ಯಾಲೆನ್ಸ್ ಮಾಡುವುದು ಸುಲಭವಾಗಿದೆ. ಆದಿಶಕ್ತಿ–ದುರ್ಗೆಗೆ ಅದು ಬೇಕೇ ಬೇಕು. ಮದಲಿನಿಂದಲೂ ನಾನು ತೆಳ್ಳಗೆ ಇರೋದು. ಮನೆ ಊಟಕ್ಕೆ ಹೆಚ್ಚಿನ ಆದ್ಯತೆ. ಸಮಯ ಸಿಕ್ಕಾಗ ಈಜಾಡುತ್ತೇನೆ. ಮೂಲತಃ ನಾನೊಬ್ಬ ಕ್ರೀಡಾಪಟು. ಪದವಿ ದಿನಗಳಲ್ಲಿ ಈಜಿನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದೆ. ನನ್ನನ್ನು ನೋಡಿದರೆ ಜಿಮ್ಮೂ ಬೇಕಿಲ್ಲ.

★ *ಪಾತ್ರ ಹೇಗನಿಸುತ್ತದೆ?*

ನಮ್ಮ ಮನೆ ದೇವರು ಅಂಬಾಭವಾನಿ. ಅದಕ್ಕೇ ನನಗೆ ತುಂಬಾ ಇಷ್ಟ ಆಗುತ್ತಿದೆ. ಈ ಪಾತ್ರ ನಿರ್ವಹಿಸಲು ಅದು ಕೂಡ ಒಂದು ಕಾರಣ. ಇಲ್ಲದಿದ್ದರೆ ನಾನು 'ಮಜಾ ಟಾಕೀಸ್'ಗೆ ಹೋಗುವವಳಿದ್ದೆ. 'ಹರಹರ' ತಂಡ ಪಾರ್ವತಿ ಪಾತ್ರದ ಆಡಿಷನ್‌ಗೆ ಆಹ್ವಾನ ನೀಡಿತು. ನನಗೆ ಅದು ಸಾಧ್ಯ ಆಗಲಾರದು ಎಂಬ ಹಿಂಜರಿಕೆಯನ್ನು ವ್ಯಕ್ತಪಡಿಸಿದೆ. ಆದರೆ ಅವರು ನೀವು ಸೂಕ್ತ ಆಗಬಹುದು. ನಾಲ್ಕು ತಿಂಗಳಿಂದ ಹುಡುಕುತ್ತಿದ್ದೇವೆ ಎಂಬ ಮಾತನ್ನು ಹೇಳಿ ನನ್ನನ್ನು ಪ್ರೇರೇಪಿಸಿದರು. ಸಂಜೆ ಹೊತ್ತಿಗೆ ಆಯ್ಕೆ ಆಗಿದ್ದು. ಗೊತ್ತಾಯಿತು. ಮುಂಬೈಗೆ ಕಳುಹಿಸಬೇಕಲ್ಲ ಎನ್ನುವ ಅಳುಕು ನಮ್ಮ ತಾಯಿಗೆ ಕಾಡಿತ್ತು. ಈಗ ಮನೆ, ಮನ ಎಲ್ಲಾ ಸಂತೋಷಪಡುತ್ತಿದೆ.

ಮತ್ತೊಂದು ಖುಷಿಯ ಸಂಗತಿ ಎಂದರೆ, ಮೊದಲು ಒಂದು ಗಂಟೆಯ ಕಂತು ಇತ್ತು. ಆಗ ನಿತ್ಯವೂ ಹಗಲು ರಾತ್ರಿ ಎನ್ನದೆ ಶ್ರಮಿಸುತ್ತಿದ್ದೆವು. ಈಗ 30 ನಿಮಿಷದ ಅವಧಿಗೆ ಇಳಿಸಿದ್ದರಿಂದ ನಮಗೆ ಸ್ವಲ್ಪ ವಿರಾಮ ಸಿಕ್ಕಂತೆ ಆಗಿದೆ.

★ *ನಿಮ್ಮ ಕುಟುಂಬದ ಬೆಂಬಲ ಹೇಗಿದೆ?*

ಅಮ್ಮ ಮಮತಾ ಚಿಂಚೋಳಿ ಅವರು ಗುಜರಾತಿ, ಅಪ್ಪ ರಾಜೀವ್ ರೆಡ್ಡಿ. ನಮ್ಮದು ಕಲಬುರಗಿ. ಅಲ್ಲೇ ಬಿಸಿಎ ಮುಗಿಸಿ, ಈಗ ಬೆಂಗಳೂರಿಗೆ ಎಂಟೆಕ್ ಮಾಡುವ ಸಂಬಂಧ ಬಂದಿದ್ದೆ. ಅಷ್ಟರಲ್ಲಿ ಎರಡು ವರ್ಷದ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಕಲಬುರಗಿಯಲ್ಲಿ ಇದ್ದಾಗಲೇ ನಾನು ಟಿವಿ ನಿರೂಪಣೆಯನ್ನು ಮಾಡುತ್ತಿದ್ದೆ. ಅಲ್ಲದೆ ಸಾರ್ವಜನಿಕ ಸಭೆಗಳನ್ನೂ ನಿರ್ವಹಿಸುತ್ತಿದ್ದೆ. ಕನ್ನಡದ ಎರಡು ಸಿನಿಮಾಗಳಲ್ಲಿಯೂ ನಟಿಸಿದೆ. ಎಲ್ಲಾ ಹಂತದಲ್ಲಿಯೂ ಅಮ್ಮ ನನ್ನನ್ನು ಬೆಂಬಲಿಸಿದ್ದಾರೆ. ನಿಜಕ್ಕೂ ಆಕೆ ನನ್ನ ಆದರ್ಶ. ನಾನೊಬ್ಬಳೇ ಮಗಳು. ತನ್ನೆಲ್ಲಾ ಮಮತೆಯನ್ನು ನನ್ನ ಆಶೆಯಲ್ಲಿ ನನ್ನ ಅಮ್ಮ ಕಾಣುತ್ತಾರೆ. ಹೇಳಿಕೇಳಿ ನಾನು ಅಮ್ಮನ ಮಗಳು. ಪ್ರತಿ ಹಂತದಲ್ಲೂ ಅವರು ನನಗೆ ಊರುಗೋಲಾಗಿದ್ದಾರೆ.

★ *ಕಿರುತೆರೆ– ಹಿರಿತೆರೆ ಬಗ್ಗೆ ನಿಮ್ಮ ಅನಿಸಿಕೆ ಏನು?*

ಸಿನಿಮಾ ಶತದಿನೋತ್ಸವ ಆಚರಿಸಿದರೂ ಜನಪ್ರಿಯತೆ ಆ ಅವಧಿಗೆ ಸೀಮಿತವಾಗಿರುತ್ತದೆ. ದಿನ ಕಳೆದಂತೆ ಅದು ಮಾಸಿ ಹೋಗುತ್ತದೆ. ಅದು ಕೆಲವೇ ಜನರನ್ನು ತಲುಪಿರುತ್ತದೆ ಎಂಬ ಮಿತಿ ಕೂಡ ಇದೆ. ಟಿವಿಯಾದರೆ ಹಾಗಾಗುವುದಿಲ್ಲ. ಅದರ ಶಕ್ತಿ ದೊಡ್ಡದು. ಮನೆಯಲ್ಲಿ ಎಲ್ಲಾ ವಯೋಮಾನದವರು ಕುಳಿತು ನೋಡುತ್ತಾರೆ. ಪಾತ್ರ– ಅಭಿನಯ ಎಲ್ಲವೂ ಚರ್ಚೆಗೆ ಒಳಗಾಗುತ್ತವೆ. ಒಬ್ಬ ಕಲಾವಿದೆಯಾಗಿ ಹೇಳುವುದಾದರೆ ಟಿವಿಯಲ್ಲಿ ಜನಮನ್ನಣೆ ಹೆಚ್ಚು ಎಂದೆನಿಸುತ್ತದೆ.

★ *ಮುಂದಿನ ಯೋಜನೆ ಏನು?*

ಮುಂಬೈಗೆ ಬಂದಿದ್ದೇನೆ. ಬಾಲಿವುಡ್‌ನಲ್ಲಿ ಒಂದು ಕೈ ನೋಡಬೇಕು ಎಂದುಕೊಂಡಿದ್ದೇನೆ. ಹಿಂದಿ ಧಾರಾವಾಹಿ– ಸಿನಿಮಾದಲ್ಲಿ ನಟಿಸುವುದು ಸದ್ಯದ ಆಶೆ. ಹಿಂದಿಯ ಮೇಲೆ ಹಿಡಿತ ಇರುವುದರಿಂದ ಅದು ಸುಲಭ ಆಗಬಹುದು ಎಂದು ಭಾವಿಸಿದ್ದೇನೆ. ಒಟ್ಟಾರೆ ಬಾಲಿವುಡ್ ಪ್ರವೇಶಿಸಲೇ ಬೇಕು ಎನ್ನುವುದು ನನ್ನ ಮುಂದಿನ ಗುರಿ.

★ *ಪೌರಾಣಿಕ ಕಥೆ ನಿಮಗೆ ಹೇಗೆನಿಸುತ್ತಿದೆ?*

ಶಿವನ ಬಗ್ಗೆ ಅಪಾರ ಪ್ರೀತಿ ನನ್ನಲ್ಲೇ ಮೂಡುತ್ತಿದೆ. ಶಿವನನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿದೆ. ಆತನ ಬಗ್ಗೆ ವಿಶ್ವಾಸವೂ ಹೆಚ್ಚಾಗಿದೆ. ಜನರಲ್ಲಿಯೂ ಇದು ಇನ್ನೂ ಹೆಚ್ಚು ಪ್ರಭಾವ ಬೀರಿದೆ. 'ಸೋಲಾ ಸೋಮವಾರ' ಎಂಬ ಆಚರಣೆಯನ್ನು ಧಾರಾವಾಹಿಯಲ್ಲಿ ನಡೆಸಿದೆವು. ಅದರಲ್ಲಿ ಇಷ್ಟಪಡುವ ಗಂಡನ ಕೈ ಹಿಡಿಯುವ ಭಾಗ್ಯ ಕುಮಾರಿಗೆ ಸಿಗುತ್ತದೆ ಎನ್ನುವ ನಂಬಿಕೆಯನ್ನು ಬಿಂಬಿಸಲಾಗಿತ್ತು. ಇದನ್ನು ಸಾಕಷ್ಟು ಹೆಣ್ಣುಮಕ್ಕಳು ಆಚರಿಸಿ ಶಿವನಲ್ಲಿ ತಮ್ಮ ಭಕ್ತಿ ಭಾವವನ್ನು ಪ್ರಕಟಿಸಿದ್ದಾರೆ.

★ *ನಿಮ್ಮ ಬೇರೆ ಆಸಕ್ತಿ ಏನು?*

ವೇದನೆಯಲ್ಲಿರುವ ಮೂಕ ಪ್ರಾಣಿಗಳ ಭಾವನೆಗೆ ಸ್ಪಂದಿಸಬೇಕು. ಅದರಲ್ಲೂ ನಾಯಿಗಳ ಪುನರ್‌ವಸತಿಗೆ ನಾನು ಒಂದಿಷ್ಟು ಸಹಾಯ ಮಾಡಬೇಕು ಎಂದುಕೊಂಡಿದ್ದೇನೆ. ಆಸಕ್ತಿ ಇರುವವರಿಗೆ ಖಂಡಿತ ಬೆಂಬಲಿಸುತ್ತೇನೆ.

■ ರಾಗು